ತಪ್ಪೇರಿ ಎರಡನೇಯವನ ಹತ್ರ ಇದ್ರೂ ತಿಜೋರಿ ಕೀಲೀ ಕೈ ಮಾತ್ರ ನನ್ನ ಕಡೇನss ಇರತದ!

**ರಾಮು** —(ಓಡುತ್ತ ಬಂದು) ಅಣ್ಣಾ ಅಪ್ಪಾ, ಆ ಮಾರವಾಡಿ ಬರಲಿಕ್ಕೆ ಹತ್ತಾನ

**ಹನಮಂತ** —ಆಂss? ಮಾರವಾಡಿ ಬಂದನ? ಅಲೆಲೆಲೆ

**ಕೃಷ್ಣಕ್ಕ** —(ಪ್ರವೇಶಿಸಿ) ಏನೋ ಹಣಮ್ಯಾ ಏನು?

**ಹನಮಂತ** —ಅಣ್ಣಾ, ಆ ಮಾರವಾಡಿ ಬರಲಿಕ್ಕ ಹತ್ಯಾನಂತ ಇವತ್ತೇನ ಅವಾ ನನ್ನ ಬಿಡೋದಿಲ್ಲ ಮನ್ಯಾಗ ಇಲ್ಲದ್ದೊಂದು ಹೇಳಿ ಕಳಸ ಬೇಕಾದರss ನ ಕಾಗಿ ಹುಲಿತು ಏನ ಮಾಡಲಿ?

**ಸಾವಿತ್ರಿ** —(ಸಲ್ಪ ವಿಚಾರಿಸಿ) ಎವತ್ತ್ಯ ಹಿಂಗ ಮಾಡ್ರೀss ಅಂತೀನಿ ಬಡ್ಡ್ಯ ಜ್ವರ ಬಂದವರ್ಹಾಂಗ ನೀವು ಮಲಿಕ್ಕೊಂಡು ಬಿಡ್ರಿ ನಾವಿಬ್ಬರೂ ಇಲ್ಲೇ ನಿಮ್ಮ ಉಪಚಾರ ಮಾಡತವರ್ಹಾಂಗ ಮಾಡತಿರತೇವು

**ಹನಮಂತ** —ಹೂಂ ಇನ್ನ ಅವಾ ಬಂದಗಿಂದಾನು, ಲಗೂನ ಹಾಸಿಗಿ ಹಾಕು

**ಸಾವಿತ್ರಿ** —ಸ್ವಲ್ಪ ಸವಾದ ನಾ ಮಾಡ್ತೇನ್ಲಾ ಇವತ್ಯಾಕ ಅಪರಾ ಮಾತಂರಿ—ನಾಟಕಾ ಆಡಸಗೀ ಮಾ ನೀಬದನ್ಹಾಂಗ!

**ಕೃಷ್ಣಕ್ಕ** —ಹಣಮ್ಯಾ, ಹಿಂಗ ಮಾಡೋ ನೀ ಸುಮ್ಮನ ದೇವರ ಮನ್ಯಾಗೊಳಗ ದೇವರ್ಹಾಂಗ ಕೂತಬಿಡು ನಮ್ಮ ಬ್ರಾಹ್ಮಣರ ದೇವರ ಮನಿಯೊಳಗ ಆದಾನ ರಾಜೇಗಂತ ಕಾಲಿಡತಾನೇನ ನೋಡತೀನ

**ಹನಮಂತ** —ದೇವರ ಮನಿಯೊಳಗ ಯಾಕss ದೇವರ ತಲಿಮ್ಯಾಲಿ ಕಾಲಿಟ್ಟು ಬರತಾನ ಏನು ನೀ ಬದರ ಕಾಳಜಿ ನೀ ಸುಮ್ನ ನ ಇರು ಅವ್ವಾ ನಾ ಎಲ್ಲಾ ಅಕಿ ಹೇಳಿದಾಂಗ ಮಾಡತೀನ

[ಹಾಸಿಗೆಯ ಮೇಲೆ ನರಳುತ್ತ ಮಲಗುವನು ಸಾವಿತ್ರಿಯೂ, ಕೃಷ್ಣಕ್ಕನೂ ಉಪಚರಿಸುತ್ತಿರುವರು ಇಮಾನಚಂದ ಮಾರವಾಡಿಯು ಬರುವನು]

**ಇಮಾನಚಂದ** —ಕ್ಯಾ ಹನಮಂತರಾವು ಪಡ್ಕೆ ಹೈದಾಸ

**ಕೃಷ್ಣಕ್ಕ** —ಬಾರಪ್ಪಾ ಸೇಠಜಿ ನನ್ನ ಮಗ್ಗ ನಿನ್ನೀಸಂಟೊ ಬಂದ

**ಸು. ನ.**—ಅಲ್ಲವ್ರೋ ! ಆಹೊತ್ತು ನನ್ನ ಡಬ್ಬಲ್ ಟಿಕೆಟ್‌ನಲ್ಲಿ ಅರ್ಧ ತಗೊಳ್ಳೋ ಅಂದರೇ....ಹಹ್ಹ ಹ್ಹ ಹ್ಹಾ ! ಹ್ಹ ಹ್ಹ ಹಾ ! ಹಹ್ಹ ಹ್ಹ ಹ್ಹಾ !!! (ನಗುವನು)

**ಸಂಗ.**—(ತಲೆಯನ್ನು ಕೊಡವಿ ಹೊರಡುತ್ತಾ) ಅದನ್ನೆಲ್ಲಾ ಜ್ಞಾಪಿಸಬೇಡ ಸುಬ್ಬುನರಸಿಂಹಯ್ಯಾ !....ನಾನು ಹೋಗಿ ಬೇಗ ಬರುತ್ತೇನೆ.

**ಸು. ನ**—ಹೋಗಿ ಬಾ ನನ್ನ ಮನೆ ದೇವರೇ !

(ಸಂಗರಾಮಯ್ಯನು ಕತ್ತನ್ನು ತಗ್ಗಿಸಿ ಹೊರಟು ಹೋಗುವನು)

ಲೇ ! ಸುಬಾಣೀ !' ಬಂಗಾರೀ ! ಸುಬ್ಬೂ !..ಭಾಗ್ಯಾ ! ಸೌಭಾಗ್ಯಾ !!!

**ಸು. ಲಕ್ಷ್ಮ**—(ಈಚೆಗೆ ಬಂದು) ಏನು ಕೂಗಿದಿರಿ ?

**ಸು. ನ:**—ಒಳಗೆ....ಮುರುಕಲು ಮನೆಯಲ್ಲಿ ಸೇರಿಕೊಂಡು ಏನು ಮಾಡುತಿದೀಯೇ ?

**ಸು. ಲಕ್ಷ್ಮ**—ಚಟ್ಟಿ ತಿರುವಿದ್ದ ಬರಳು ತೊಳದೆ. ಬರಸೋದಕ್ಕೆ ಬಟ್ಟೆ ಚೂರಿಗಾಗಿ ಹುಡುಕುತಾ ಇದ್ದೆ.

**ಸು. ನ**—(ರುಮಾಲನ್ನು ತೆಗೆದು ಎಸೆದು) ಅದಕ್ಕೆ ಯಾಕೇ ಯೋಚನೇ ? ತಗೊಳ್ಳೇ ! ಬರಸಿ ಹಾಕೇ.

**ಸು. ಲಕ್ಷ್ಮ**—ಉಂಟೇಂದ್ರೋ ?

**ಸು. ನ:**—ಉಂಟು ಕಾಣೇ ! ಉಂಟೇ ! ಕೂತುಕೋ ಬಾ ! ಬರಳನಾ ನುನೇ ಕಟ್ಟೋದಕ್ಕೆ ಬರುವ ಮೇಸ್ತ್ರೀ ಕೈಲೇ ಬರಸಿಸಿದರಾಯಿತು.... ಬಾರೇ ಇಲ್ಲಿ....ಕೂತುಕೋ ಬಾರೇ....

(ಸುಬ್ಬುಲಕ್ಷ್ಮಮ್ಮನು ಬಂದು ಕೂಡುವಳು)

ನಮ್ಮ ಮಗೂ ಮದುವೇಲಿ ಸಂಗೀತ ಕಛೇರಿಗೆ ಯಾರನ್ನ ಕರೆಸೋದೇ ?

**ಸು. ಲಕ್ಷ್ಮ:**—ಪಟ್ಟಮ್ಮಾಳ್‌ನೋ, ಎಂ. ಎಸ್. ಸುಬ್ಬುಲಕ್ಷ್ಮೀನೋ ಕರೆಸೋದು.

**ಸು. ನ**—ನನಗನ್ನಿಸೋದೂ......ನಿನ್ನ ಕೈಲೇ ಕಛೇರಿ ಮಾಡಿಸಿ ಬಿಡೋದೂಂತ. ನೀನು ಎಂ. ಎಸ್. ಸುಬ್ಬುಲಕ್ಷ್ಮಿ ಆಗದಿದ್ದರೂ, ಎಸ್. ಎಸ್. ಸುಬ್ಬುಲಕ್ಷ್ಮೀ ಕಾಣೇ !

**ಸು. ಲಕ್ಷ್ಮ**—ಅಂದರೇ ?

# ಪ್ರವೇಶ

[ಹನಮಂತರಾಯನ ಬಡತನ ತೋರಿಸುವ ಸಾಮಾನ್ಯವಾದ ಒಂದು ಮನೆ. ಸಾವಿತ್ರಿಯು ತನ್ನ ಹತ್ತು ವರುಷದ ಮಗು, ರಾಮುವಿನ ಹುಟ್ಟಿದ ಹಬ್ಬ ಮಾಡಬೇಕೆಂಬ ಯೋಚನೆಯಲ್ಲಿ ಕುಳಿತಿರುವಳು]

**ಸಾವಿತ್ರಿ**—ಮನಿಯೊಳಗ ಬ್ಯಾರೆ ಏನೇನೂ ಇಲ್ಲ. ಇವತ್ತ ನೋಡಿದರ ಹುಡುಗನ ಹುಟ್ಟಿದ ಹಬ್ಬ! ಅವರು ನಿನ್ನೆ ರಾತ್ರೀನs ಹೊರಗ ಹೋದವರು ಇನ್ನೂತನಕ ಬರಲಿಲ್ಲ! ಹುಡುಗ್ಗ ಯಾಕ್ಹ್ಯಾಳ್ಳಿಕ್ನೆ ಒಂದ ಧರ್ಮಿಷ್ಟ ಟೊಪ್ಪಿಗಿ ಇಲ್ಲಾ, ಅಂಗಿ ಇಲ್ಲಾ! ನಮ್ಮ ಮನಿ ಅಂದರ ಬಾಂಬ ಬಿದ್ದ ಊರು ಆಧ್ಯಾಗಿ ಆಗೇದ. ಅತ್ತೆಯವರಿಗಂತೂ ನಮ್ಮ ಮನಿ ಬಗ್ಗೆ ಸ್ವಲ್ಪೂ ಕಾಳಜಿ ಇಲ್ಲ. ಎಲ್ಲಾ ನನಗs ಹತ್ತೇದ.

**ಕೃಷ್ಣಕ್ಕ**:—(ನಡೆಯುತ್ತ) ಏನs! ಏನ ಅದು ನಿನಗ ಹತ್ತಿರೋದು? ದೇವ್ರನ್ಯಾಂಗ ಈ ಮನಿ ನಡಿಸಿಕೊಂಡು ಹೋಗೋ ಯಜಮಾನತಿ ನಾನು ಇರಲಿಕ್ಕೇ ಪ್ರಾರಂಭಾತ್ಲೆs ನಿನ್ನ ಒದರಾಟ. ನಾ ಇದ್ದರs ಇಷ್ಟು. ಇಲ್ಲದಿದ್ದರ ನೀನು ಎಲ್ಲೆ ಹೂಲಿಗೇರಿ ಮಾದಿಗ್ಗೇರಿ ಒಂದ ಮಾಡತಿದ್ರೇನೋ ಅಂತೇನಿ!

**ಸಾವಿತ್ರಿ**:—ನೀವು ಇನ್ನೂ ತನಕ ಇದ್ದೀರಂತsನs ಒದರ್ಯಾಡೋದು, ಒಡಿದಾಡೋದು. ನೀವು ಇಲ್ಲದ್ದೊಂದು ಅವರೆದುರಿಗೆ, 'ನಿನ್ನ ಹೇಣ್ತಿ ಹಾಂಗಿವ್ಯಾಳ, ಹೀಂಗ ಮಾಡ್ಯಾಳ' ಅಂತ ಸುಳ್ಳ ಸುಳ್ಳs ಏನಾದರೂ ಹೇಳೋದು. ಅವರು ನಮ್ಮ ಮ್ಯಾಲೆ ಹರಿಹಾಯೋದು. ಅಲ್ಲಾs ನಾನು 'ಇವತ್ತು ಹುಡುಗನ ಹುಟ್ಟಿದ ಹಬ್ಬ. ಅವರು ಇನ್ನೂ ತನಕ ಬರಲಿಲ್ಲ. ಇನ್ನ ಅವರು ಬಂದು ಸಾಮಾನಾ ಯಾವಾಗ ತರಬೇಕು? ನಾನು ಅಡಿಗಿ ಯಾವಾಗ ಮಾಡಬೇಕು!' ಅಂತ ಯೋಚನೆ ಮಾಡತಿದ್ದೆ. ಅದಕ್ಕ ನೀವ್ಯಾಕ ಇಷ್ಟು ಸಿಟ್ಟಿಗೇಳತೀರಿ?

ಜ್ವರ ಆರಿಲ್ಲಾ. ಎಳ್ಳ ಇಟ್ರ ಸಿಡಿಯೋ ಹಾಂಗ ಜನ ಜ್ವರ. ತಂದ ಹಾಕೋ ಒಬ್ಬ ಮಗ ಮಲಗಿಬಿಟ್ಟ್ಯಾನ....!

**ಇಮಾನಚಂದ:**—ಅರೆರೆರೆ! ಬಾಲಾಜಿ! ಕ್ಯಾ ಹನಮಂತರಾವು ತಬೀಯತ್ ಕೈಸೇ ಹೈ ?

**ಹನಮಂತ**—(ನರಳುತ್ತ) ಹಾಂ..ಅಯ್ಯಯ್ಯೋ.ಬರ್ರಿ ಸೇಡಜಿಯವರ. ಉಶ್....(ಹೆಂಡತಿಗೆ) ಏ! ಸುಮ್ಮನ ನಿಂತೆಲ್ಲs......ಸೇಡಜಿಯವರಿಗೆ ಒಂದು ಕುರ್ಚಿ ತಂದ ಇಡಲ್ಲಾ. (ಸಾವಿತ್ರಿಯು ಒಂದು ಕುರ್ಚಿ ತಂದಿರಿಸುವಳು) ಆಂ..ಆಂ..ಕೂಡ್ರಿ ಸೇಡಜಿಯವರ....

**ಇಮಾನಚಂದ:**—ದೇಖೋ ಹನಮಂತರಾವ್, ನಿಮ್ಮ ತಬೀಯತ್ ಅಚ್ಛಾ ಇಲ್ಲಾ, ನಮಗೆ ತಿಳೀತಾವ. ಲೇಕಿನ್ ನಮ್ಮ ಬೋಕಿ ಚಾರ ಬರಸ ಆತು ಇನ್ನೂ ಬರಲೀಲಾ. ರೋಕಾ ನಮ್ಮ ಅಸಾ ಗಂಟು ಈಲಾ. ನಾಳೆ ಕೊಡತಾವ, ನಾಡದು ಕೊಡತಾವ ಅಂತಾ ಹೇಳಿದರೇss....ದೇಖೋ ಹಮಾರಾ ಪೇಟ ಕೈಸಾ ಚಲೇಗಾ? ಆಜ ಲೇಕಾ ಚೂಕ್ತಾ ಆಗಬೇಕ್, ಬಿಡೋದಿಲ್ಲ

**ಕೃಷ್ಟಕ್ಕ**—ಎಲ್ಲಿಂದ ಕೊಡಬೇಕಪ್ಪಾ? ನನ್ನ ಮಗ್ಗ ಸೆಟ್ಟಗಾತೂ ಅಂದ್ರ ನಿನ್ನ ಸಾಲ ಎಷ್ಟರದು? ಒಬ್ಬರದು ಒಂದು ಪೈ ಇಟಗೊಂಬೋವಲ್ಲ ನನ್ನ ಮಗಾ. ನಿನ್ನ ಮನೀ ತನಕಾ ಬಂದು ಕೊಡತಾನ ಹೋಗು.

**ಇಮಾನಚಂದ.**—ಅರೇ, ಏ ಮೂದಕಿ, ನಮ್ಮಗೆ ಕಿತನಾ ತ್ರಾಸ ಆದಾವ ನಿಮ್ಗೇ ಯೇನ್ ಗೊತ್ತು? ಅರೇ, ನಾವ್ ಹಸ್ತೆ ಖುದ್ದ ಮನಿಗೇ ಬಂದ್ರೇ ಬೋಕಿ ಬರೋದಿಲಾ. ನಮ್ಮ ಮನೀಗೆ ಬಂದು ರೋಕಾ ಕೊಡತಾವ್ ನೀಮ್ಮ ಹನಮಂತರಾವ್? ಹನಮಂತರಾವ್, ಆಜ ಲೇಕಾ ಚೂಕ್ತಾ ಆಗವೇಕ್ ದೇಖೋ.

**ಹನಮಂತ:**—ಏನs ಸೇಡಜಿಯವರಿಗೆ ಒಂದಿಷ್ಟು ಚಹಾನರs ಮಾಡಿ ಕೊಡಲ್ಲಾ. ಆಂ..ಆಂ..ಅಲ್ಲಾ ಮತ್ತs ಅವರು ಚಹಾ ತಗೊಳ್ಳೋದಿಲ್ಲ ಕಾಣಸ್ತದ. ಹಾಲರs ಕಾಸಿ ಕೊಡಲ್ಲ. ಉಶ್....ಇಲ್ಲೋನು..... ಪುಟ್ಟಕ್ಕಾವರ ಮನಿಯೊಳಗ ಅಷ್ಟು ಕೇಶರಿ ಇಸಗೊಂಡ ಬಂದು ಹಾಕು.

**ಬಸಪ್ಪಶೆಟ್ಟಿ:**—ಅಲೇ ಇವನ, ಮನೀತನಾ ಬಾಕಿ ಕೇಳಾಕ ಬಂದ್ರ ನೆಲೀ ಇಲ್ಲ. ಇನ್ನ ಮನೀತನಕಾ ಬಂದ ಕೊಡತಾನಂತಿವ ! ಯೇನ ಚಂಡಿಗೆ ಕೈಯ. ನನಗ ಕಲಿಸಾಕ ಬರತೀಯಲ್ಲೋ ಹನಮಂತರಾಯಾ !

**ಹನಮಂತ**—ಕೂತರ ಕೂಡ್ರಿ ಶೆಟ್ರ. ನೀವು ತಂದ್ರೆಪಾ, ನಾ ಮಗನ್ರೆಪಾ. ತಂದಿ ಮಕ್ಕಳು ಎಷ್ಟು ಬಡದಾಡಿದರೇನು, ಎಷ್ಟು ಜಗಳಾಡಿದರ ಏನು ? ಹೀಂಗ ನಡೆಯೂದ್ರೆಪಾ ಎಲ್ಲಾನೂ. ಅಂ..ಅಲ್ರಿ ಶೆಟ್ರ, ಹೋದ ಸರೇದ ಇಲೆಕ್ಶನ್‌ದಾಗ ಇನ್ನೊಂದ ಹತ್ತ ನೋಟು ಜಾಸ್ತಿ ಬಿದ್ದಿದ್ದವ್ರ ಅಂದ್ರ ಕಾಳಿ ಹುಡಿಕಿಬಿಡತಿದ್ರಿ ಊರೊಳಗ. ನೀವು ಆರಿಸಿ ಬರದಿದ್ದದ್ದಕ್ಕ ನಾನು ಊರೊಳಗ ಮಾರಿಯೆತ್ತಿ ಅಡ್ಡಾಡುಹಂಗಿಲ್ಲ. ಈ ವರ್ಷನೂ ಆ ನಿಮ್ಮ ಇದರಿನ ಅಂಗಡಿ ಗಾಣಿಗೇರ ಗಂಗಪ್ಪ ಇಲೆಕ್ಶನ್ನಿಗೆ ನಿಲ್ಲತಾನಂತ. ಅವರ ಪೈಕಿ ಮಂದಿ ನನ್ನೆದುರಿಗೆ 'ನಿಮ್ಮ ಬಸಪ್ಪಶೆಟ್ರು ಹೋದ ಸಲ ನಿಂತು ಮಂಗ್ಯಾನ್ಹಂಗ ತಲ್ಲಿ ಕಿಸಿದರು ಈ ಸರೇನೂ ನಿಂದರಲಿ ಅವನ ಡಬ್ಬಿ ಹಾಕತೀವಿ' ಹಾಂಗ ಹೀಂಗ ಅಂತ ಮಾತಾಡಲಿಕ್ಕೆ ಹತ್ತಿದ ಕೂಡ್ಲೆ ನನಗೂ ಭಾಳ ಸಿಟ್ಟು ಬಂತ್ರೆಪಾ. ನಾನೂ ಆ ಮಕ್ಕಳಿಗೆ 'ಹೋದ ವರ್ಷ ಫೇಲ ಆದ್ರ ಏನಾತೋ. ನಮ್ಮ ಬಸಪ್ಪಶೆಟ್ರು ಅಂದ್ರ ಹಕನಾಕ ಅಂತ ತಿಳಿದೀದೇನು ? ಈ ವರ್ಷ ನಮ್ಮ ಹೊಡ್ತಾನರ ನೋಡು. ಶಿರಟ್ಟೀಮಂಠದ ಆನೀ ತರಿಸಿ, ಆನೀ ಮ್ಯಾಲೆ ಶೆಟ್ರನ್ನ ಮೆರಸತೀವಿ ಹಂಗ' ಅಂತ ಹೇಳಿಬಿಟ್ಟೆ.

**ಬಸಪ್ಪಶೆಟ್ಟಿ**—ಹೀಂಗೇನ ಹಂಗಾರ ? ಅಲಾಲಾಲಾ ಎಷ್ಟು ಸೊಕ್ಕಪಾ ಆ ಮಗಾ ಗಂಗ್ಯಾಂದು. ಆಗಲಿ ಹಂಗಾರ; ನಂದರ ಆಗಲಿ, ಅಮಂದರ ಆಗಲಿ. ನನ ಮನೀ ಗದ್ದಿಗ್ಗಲ್ಲು ಸರದ್ರೂ ನಾ ಯೇನ ಹೆದರೋ ಹಾಂಗಿಲ್ಲ. ನೀ ಮಾತ್ರ ಬಂದೀಟು ಓಡ್ಯಾಡಬೇಕು ನೋಡು. ಮತ್ತ ಅಂಥಾ ಗಂಗ್ಯಾ ನಿನಗೇನರ ರೊಕ್ಕದ ಆಶಾ ಹಚ್ಚ್ಯಾನು, ಜ್ವಾಕಿ ಮತ್ತ. ರೊಕ್ಕಕ್ಕ ಹೆದರಬ್ಯಾಡೇನಪಾ. ನೀ ಇಷ್ಟ ನನ್ನ ನಲುವಾಗಿ ಕೆಲಸಾ ಮಾಡತೀದಿ ಅಂದ ಮ್ಯಾಲೆ ನಿನಗ ನಾ ರೊಕ್ಕಕ್ಕ ಹಿಂದಮುಂದ ನೋಡೇನ !

**ಹನಮಂತ:**—ಛೇ ಛೇ ! ಅಲ್ರೀ ಶೆಟ್ರ, ನಾ ನಿಮಗ ಎಂದಾದ್ರೂ ಹೊತ್ರ್ಜ ಇದ್ದೇನ ? ನನಗ ನೀವು ಯಾವ ಥರದ ಮದ್ದತ್ತ ಮಾಡೋದಿಲ್ಲಾ ಅಂತ ಆ ಗಂಗಪ್ಪನ ರೊಕ್ಕಕ್ಕ ಆಶಾ ಮಾಡಲಿ ? ಬೇಕಾದ್ಹಾಂಗ

